॥ ಶ್ರೀ ಗುರುಭ್ಯೋ ನಮಃ ॥

# ಶ್ರೀ ಪುರಂದರದಾಸ ವಿರಚಿತ ದೇವರ ನಾಮ "*ಭಾಗ್ಯದ ಲಕ್ಷ್ಮೀ ಬಾರಮ್ಮ*"

ಡಾ॥ ನಾ ಸು. ಶ್ರೀಗಿರಿನಾಥ್
ಬೆಂಗಳೂರು

ಭಾಗ್ಯದ ಲಕ್ಷ್ಮೀ ಬಾರಮ್ಮಾ ನಮ್ಮಮ್ಮ ನೀ ಸೌಭಾಗ್ಯದ ಲಕ್ಷ್ಮೀ ಬಾರಮ್ಮ ।ಪ।
ಹೆಜ್ಜೆಯ ಮೇಲೆ ಹೆಜ್ಜೆಯ ನಿಕ್ಕುತ ಗೆಜ್ಜೆ ಕಾಲ್ಗಳ ಧ್ವನಿಯನು ತೋರುತ ।ಸಜ್ಜನ ಸಾಧು
ಪೂಜೆಯ ವೇಳೆಗೆ ಮಜ್ಜಿಗೆಯೊಳಗಿನ ಬೆಣ್ಣೆಯಂತೆ ।೧।

ಕನಕ ವೃಷ್ಟಿಯ ಕರೆಯುತ ಬಾರೆ। ಮನಕೆ ಮನವ ಸಿದ್ಧಿಯ ತೋರುತ ।
ದಿನಕರ ಕೋಟಿತೇಜದಿ ಹೊಳೆಯುವ ಜನಕರಾಯನ ಕುಮಾರಿ ಬಾರೆ ।೨।

ಅತ್ತಿತ್ತಲುಗದೆ ಭಕ್ತರ ಮನೆಯಲಿ। ನಿತ್ಯ ಮಹೊತ್ಸವ ನಿತ್ಯ ಸುಮಂಗಳ।
ಸತ್ಯವ ತೋರುತ ಸಾಧು ಸಜ್ಜನರ । ಚಿತ್ತದಿ ಹೊಳೆಯುವ ಪುತ್ಥಳಿ ಗೊಂಬೆ ।೩।

ಶಂಕೆ ಇಲ್ಲದ ಭಾಗ್ಯವನಿತ್ತು। ಕಂಕಣ ಕೈಯ ತಿರುವುತ ಬಾರೆ।
ಕುಂಕುಮಾಂಕಿತೆ ಪಂಕಜ ಲೋಚನೆ। ವೆಂಕಟರಮಣ ಬಿಂಕದ ರಾಣಿ ।೪।

ಸಕ್ಕರೆ ತುಪ್ಪ ಕಾಲುವೆ ಹರಿಸುತ। ಶುಕ್ರವಾರದ ಪೂಜೆಯ ವೇಳೆಗೆ।
ಅಕ್ಕರೆಯುಳ್ಳ ಅಳಗಿರಿ ರಂಗನ। ಚೊಕ್ಕ ಪುರಂದರವಿಠಲನ ರಾಣಿ ।೫।

*************

## ಈ ಕೃತಿಯ ಬಗ್ಗೆ ಅನಿಸಿದ ಅಭಿಪ್ರಾಯ:

ಅಪರೋಕ್ಷ ಜ್ಞಾನಿಗಳಾದ ಪುರಂದರದಾಸರ ಕೃತಿಯ ಪೂರ್ಣಾರ್ಥಗಳನ್ನು ಅವರೇ ಬಲ್ಲರು. ಅವರು ಉಪಾಸನೆ ಮಾಡಿದ ಸರ್ವಜ್ಞ ಪುರಂದರವಿಠಲನು ಬಲ್ಲನು.

ನಮಗೆ ಅವರು ಪ್ರೇರೇಪಿಸಿದ್ದನ್ನು ಲಿಖಿತ ಮಾಡಿದೆ. ಅಪಾರ್ಥಗಳು ಇಣುಕಿದ್ದರೆ ಕೊಡವಿ ಹಾಕಿ ಉಳಿದಿದ್ದನ್ನು ಗ್ರಹಿಸಿ ದೇವರಿಗೆ ಅರ್ಪಣೆ ಮಾಡಿ.

ಶ್ರೀ ದಾಸರು ಆಗರ್ಭ ಸಿರಿವಂತರಾಗಿದ್ದವರು. ಅದನ್ನು ತ್ಯಜಿಸಿ ಸರಳ ಜೀವನವನ್ನು ಆಯ್ದುಕೊಂಡವರು. ಅವರ ಈ ಕೃತಿ ಮುಮುಕ್ಷುಗಳು ಪಕ್ವವಾಗುವ ಮುನ್ನ ಸಕಾಮ ಸೇವಾ ನಿರತರಾಗಿದ್ದರೆ ಆಶ್ಚರ್ಯ ಪಡಬೇಕಾಗಿಲ್ಲ. ಅಂಥವರು ಈ ಹಾಡಿನಿಂದ ಶ್ರೀ ದೇವಿಯನ್ನು ಸಂತೋಷಿಸಿ ಅನುಗ್ರಹಕ್ಕೆ ಪಾತ್ರರಾಗಲು ದಾಸರು ಈ ಕೃತಿಯನ್ನು ಅವರಿಗೆ ಅನುಗ್ರಹಿಸಿದರು ಎಂದರೆ ತಪ್ಪೇನಿಲ್ಲ, ಅದು ಸಿದ್ಧಿಯೇ ಅಗುತ್ತದೆ.

ಆದರೆ ಇದೇ ಕೃತಿ ಪಕ್ವರಾದ ಸಾಧಕರು ಬಳಸಿದಾಗ ಜ್ಞಾನ ವೈರಾಗ್ಯ ಭಕ್ತಿ ಮುಂತಾದವು ವಿಕಸಿತವಾಗಿ ರಮಾ ರಾಮರ ಅನುಗ್ರಹಕ್ಕೆ ಪಾತ್ರರಾಗಲು ಕೈ ಹಿಡಿದು ನಡೆಸುತ್ತದೆ ಎಂದು ಅನಿಸಿಕೆ. ಆ ಅನಿಸಿಕೆಗಳು ಇಲ್ಲಿ ಬರಹ ರೂಪ ತಾಳಿದೆ. ಪುರಂದರದಾಸರು ಕನಕದಾಸರು ಶ್ರೀ ವ್ಯಾಸರಾಯರ ಶಿಷ್ಯರು. ಗುರುಗಳ ಮನಸ್ಸಿಗೆ ಅಚ್ಚುಮೆಚ್ಚಿನವರು ಎಂದು ಇತಿಹಾಸ ತಿಳಿಸುತ್ತದೆ.

ಈ ಕೃತಿಯಲ್ಲಿ ಐದು ನುಡಿಗಳಿವೆ. ಶ್ರೀ ಮಧ್ವಸಿದ್ಧಾಂತದಲ್ಲಿ ಐದಕ್ಕೆ ಮಹತ್ವವಿದೆ. ಪಂಚ ರೂಪ ಪಂಚ ಭೇದ.... ಇತ್ಯಾದಿ. ನಾವಿರುವುದೂ ಪ್ರ-ಪಂಚದಲ್ಲಿ, ಐದು ವಸ್ತುಗಳು. ಪ್ರಬಲವಾಗಿ ನಿಕಟವಾಗಿ ಹೆಣೆದುಕೊಂಡಿರುವುದರಲ್ಲಿ ಇದ್ದೇವೆ. ದೇಶ, ಕಾಲ, ಜಡ, ಚೇತನ, ಮತ್ತು ಈ ನಾಲ್ಕನ್ನು ಹುಟ್ಟಿಸುವ, ಬೆಳೆಸುವ ಮತ್ತು ಅಳಿಸುವ (ಅಳಿಸುವುದೂ ಉಂಟು) ಐದನೆಯವನಾದ ಪರಮಾತ್ಮ - ಶ್ರೀ ವಿಷ್ಣು. ಮೊದಲ ನಾಲ್ಕು ನಮ್ಮ ಅನುಭವಕ್ಕೆ (ಇಂದ್ರಿಯವೇದ್ಯ) ಬರುತ್ತಿದ್ದು ಐದನೆಯದಾದ ವಿಷ್ಣು, ಅನುಭವಕ್ಕೆ ಹಿಂದಿನವುಗಳಂತೆ ನೇರವಾಗಿ ಬರುತ್ತಿಲ್ಲ. ಅವನಿಂದಾದ ಒಂದು ಪುಷ್ಪ ಅಥವಾ ಬೀಜ, ಪ್ರಾಣಿಯ ರಚನೆ ಅದರಲ್ಲಿ ಕಾಣುವ ಸಮತೆ, ಬಣ್ಣಸಂಯೋಜನ, ಕಾರ್ಯ ಮಾಡುವವಿಧಾನಗಳನ್ನು ಎಚ್ಚರಿಕೆಯಿಂದ ಗಮನಿಸಿದಾಗ ಒಬ್ಬ ಮಹಾನ್ ಪರಿಣಿತನ ಕೈಚಳಕ ಕಲ್ಪನಾತೀತ. ಕಾರುಣ್ಯ, ಸೌಂದರ್ಯ ಪ್ರಜ್ಞೆ ಕಂಡುಬಂದು ನಮ್ಮಲ್ಲಿ ಶರಣು ಹೋಗುವಭಾವನೆ ಮೂಡಿಸುತ್ತದೆ.

ಮೊದಲ ನಾಲ್ಕರ ಅಭಿಮಾನಿ ಲಕ್ಷ್ಮೀ ದೇವಿ. ವಿಷ್ಣುವಿನಂತೆ ಅವಳು ನಿತ್ಯ ಮುಕ್ತಳು. ಅವನಿರುವಲ್ಲೆಲ್ಲಾ ಅವಳಿದ್ದಾಳೆ. ಆದ್ದರಿಂದಲೇ ಅವಳು ಸಮನಾ ಎನ್ನಿಸುತ್ತಾಳೆ. ಆದರೂ ಅವನಿಗಿಂತ ಕೋಟಿ ಕೋಟಿ ಗುಣಗಳು ನ್ಯೂನ್ಯಳು. ಆ ಮಹಾದೇವಿ ಜ್ಞಾನ ಪೂರ್ಣೆಯೂ ಆಗಿರುವುದರಿಂದ (ಅದು ಅವಳಿಗೆ ಸಹಜವಾದದ್ದು, ಸಾಧನದಿಂದ ಲಭಿಸಿದ್ದಲ್ಲ) ಪ್ರತಿಕ್ಷಣಕ್ಕೂ ತನ್ನರಿವಿಗೆ ಬಂದದ್ದೆಲ್ಲಾ ತನ್ನ ಸ್ವಾಮಿಯ ಅನಿಮಿತ್ತ ಕಾರುಣ್ಯದ ಫಲವೆಂದು ಸದಾ ತಿಳಿದಿರುವ ಸರ್ವ ಮಂಗಳೆ ಅವಳು. ಆದ್ದರಿಂದಲೇ ನಮಮ ಎಂದು ಉಸಿರಾಟದಂತೆ ನೆನೆಯುವಾಕೆಯೇ ಅವ್ಯಾಕೃತಕ್ಕೆ ಅಭಿಮಾನಿಯಾದ ಲಕ್ಷ್ಮೀದೇವಿ. ಈ ನಮಮ ನಮಮ ಎಂದು ಹೇಳುತ್ತಾ ಹೋದಾಗ ಅದು ಕನ್ನಡದ ನಮ್ಮಮ್ಮವಾಗಿಬಿಡುತ್ತದೆ. ಅದನ್ನು ನಾವು ಮರೆತೋ, ಅಲಕ್ಷಿಸಿಯೋ ಹೇಳದೇ ಇದ್ದರೂ ಅವಳು ನಮ್ಮಮ್ಮನೇ ಸರಿ. ಅಂಥ ಅಚಲ ಜ್ಞಾನವೇ ಅವಳ ಸೌಭಾಗ್ಯ, ಸಹಜವಾಗಿ ಬಂದದ್ದು, ಸಾಧನಾಫಲವಲ್ಲ. ಅಂತಹ ಉತ್ತಮ ಚೇತನಳು ಲಕ್ಷ್ಮೀ. **ಆ** ಸೌಭಾಗ್ಯದ ಲಕ್ಷ್ಮೀಯನ್ನು ದಾಸರು ಪ್ರಾರ್ಥನಾಮೂಲಕ ಆಹ್ವಾನಿಸುತ್ತಿದ್ದಾರೆ. ಇದು ಪಲ್ಲವಿಯ ಭಾವವೆನಿಸುತ್ತದೆ.

ಶ್ರೀ ವಿಷ್ಣು ಭಕ್ತಪ್ರಿಯ. ಭಕ್ತರೇ ನನ್ನ ಪ್ರಾಣ, "ಮಮ ಪ್ರಾಣಾಹಿ ಪಾಂಡವಾಃ" ಎಂದು ಸಾರುವಾಗ ಅವನ ಸಹಧರ್ಮಿಣಿ ಅವನ ವಕ್ಷಸ್ಥಳವಾಸಿನಿ, ನೀನು. ಸಾಧು, ಸಜ್ಜನರು ಮಾಡುವ ಪೂಜೆಯ ವೇಳೆಗೆ ಬರ ಬೇಕಂಬುದು ಸಹಜವಲ್ಲವೇ. ನೀನು ದರ್ಶನ ಕೊಟ್ಟರೂ ಅದನ್ನು ಸಹಿಸುವ ಶಕ್ತಿ ನಮ್ಮಲ್ಲಿಲ್ಲವೇನೋ! ಯೋಗ್ಯತೆ ಇದ್ದರೆ ಸಾಧಿಸಿಲ್ಲವೇನೊ. ನೀನು ಅವ್ಯಕ್ತ ತತ್ವಕ್ಕೆ ಅಭಿಮಾನಿ ಆದ್ದರಿಂದ ದರ್ಶನಕ್ಕಾಗದ ಶಬ್ದ ಕರ್ಣಕ್ಕೆ ಗೋಚರವಾಗುವಂತೆ ನಿನ್ನ ಸಾನಿಧ್ಯದ ಕುರುಹನ್ನು ನಮ್ಮ ಮನಸ್ಸಿಗೆ ವೇದ್ಯಮಾಡು. ಮಜ್ಜಿಗೆಯೊಳಗೆ ಬೆಣ್ಣೆ ಇದ್ದರೂ ಮಥನವಾಗದೆ ಕಾಣಿಸದು. ಮಥನವಾಯಿತೆಂದರೆ ಒಳಗಿದ್ದ ಬೆಣ್ಣೆ ತೇಲಿಮೇಲ್ಬರುವಂತೆ ನನ್ನ ಮನಸ್ಸನ್ನು ಶುದ್ಧಗೊಳಿಸಿ ನಿನ್ನ ಇರುವನ್ನು ವೇದ್ಯಮಾಡು ಎಂದು ಒಂದನೇ ನುಡಿಯಲ್ಲಿ ಬಿನ್ನಹ ಮಾಡಿದ್ದಾರೆ ಎಂದು ಅನಿಸಿಕೆ. ಇನ್ನೇನೇನು ಭಾವಗಳಿದೆಯೊ ಆ ಭಾವಜನ ಅಮ್ಮನಿಗೇ ಗೊತ್ತು.

ದೇವರು ಹಿರಣ್ಮಯನೆನಿಸುತ್ತಾನೆ ಅವನಿಗೂ ಅವನ ಗುಣಗಳಿಗೂ ಭೇದವಿಲ್ಲ, ಅವನಿಗೂ ಅವನ ಕಾರ್ಯಕ್ಕೂ ಭೇದವಿಲ್ಲ. ಹಾಗೆಯೇ ಅವನಿಗೂ ಅವನ ನಾಮಗಳಿಗೂ ಭೇದವಿಲ್ಲ (ನೀನ್ಯಾಕೊ ನಿನ್ನ ಹಂಗ್ಯಾಕೊ ನಿನ್ನ ನಾಮದ ಬಲವೊಂದಿದ್ದರೆ ಸಾಕು ಎಂದು ಅವರೇ ಹೇಳಿದ್ದಾರೆ) ಆ ನಾಮವು ಮಳೆಗರೆದಂತೆ,

ನನ್ನಿಂದ ಬಂದಾಗ ಅದು ನಿನ್ನ ಆಗಮನದ ಫಲವೆಂದೇ ತಿಳಿಯುತ್ತೇನೆ. ಕನಕದಾಸರು ದೇವರ ನಾಮಗಳ ಮಳೆಗರೆದಂತೆ ಹರಿನಾಮ ವೃಷ್ಟಿ ಆಗಲೆಂದು ಮೊರೆಯಿಡುತ್ತಾರೆ. ನನ್ನ ಸಾಧನೆಯ ಫಲ ಮನಶುದ್ಧತ್ವ ಹರಿ ಕಾರ್ಯದಲ್ಲಿ ಲೀನವಾಗುವಿಕೆ, ಅದು ಸರ್ವದಾ ಹರಿ ಸೇವಾಧುರಂಧರಣೆಯಾದ ನಿನ್ನ ಸಾನಿಧ್ಯದಿಂದ ಸಾಧ್ಯ. ಆ ರೀತಿ ಮನಕ್ಕನುಭವ ಕೊಡು. ಕೋಟಿಸೂರ್ಯ ಪ್ರಭೆಯುಳ್ಳನೀನು ನನ್ನ ಮನಸ್ಸಿನಲ್ಲಿ ಪ್ರಕಾಶಿಸು. ಅದರ ಅನುಭವವಾಗಲೆಂಬುದು ಎರಡನೆ ನುಡಿಯ ಭಾವವೆನಿಸುತ್ತೆ.

ಅದರೊಡನೆ ಇನ್ನೊಂದು ಮಾತನ್ನು ಹೇಳಲು ಮರೆಯುವುದಿಲ್ಲ. ನೀನು ಜನಕರಾಯನ ಕುಮಾರಿ ಎನ್ನುತ್ತಾರೆ. ತ್ರೇತೆಯಲ್ಲಿ ಜನಕರಾಜನ ಕುಮಾರಿಯಾದ ಜಾನಕಿ ನೀನೇಎಂಬುದು ಬಲ್ಲೆ. ಆಗ ವಿಷ್ಣು ರಾಮನಾಗಿದ್ದ. ಆದರೆ ನೀನು ಈಗಲೂ ಆಗಲೂ ಯಾವಾಗಲೂ ಜನಕರಾಯನ ಕುಮಾರಿಯೇ ಎನ್ನುತ್ತಾರೆ. ಹೇಗೆಂದು ಅವಳು ಕೇಳಿದರೆ ದಾಸರು ಈರೀತಿ ಹೇಳಬಹುದು. ಜನಕ ತಂದೆ, ತಂದೆಯರನ್ನೆಲ್ಲಾ ಜಗತ್ತಿಗೆ ತಂದವನು ಜನಕರಾಯನೆನಿಸುತ್ತಾನೆ. ಅವನೇ ವಿಷ್ಣು- ನಾರಾಯಣ. ಅವನೊಡನೆಯೇ, ಅವನಿರುವೆಡೆಯೇ ಸರ್ವದಾ ಕುಂದುಗಳು ಯಾವಕಾಲದಲ್ಲೂ ಸೋಕಲಾರದ ಚೇತನಳೆ ನೀನು. ಆದ್ದರಿಂದ ಕುಮಾರಿ. (ಆಘ್ರಾಣಿತ ಕುಸುಮವೆನ್ನಿಸುತ್ತಿ) ಎಂದು ಕರೆದ್ದಿದ್ದಾರೆ.

ಲಕ್ಷ್ಮಿ ಚಂಚಲೆ ಅವಳೆಲ್ಲೂ ನಿಲ್ಲುವುದಿಲ್ಲ ಎಂಬುದು ಜನಮನದಲ್ಲಿ ನಿಂತಿದೆ. ಅದೇನು ತಪ್ಪಲ್ಲ. ಐಶ್ವರ್ಯ ಸಂಪತ್ತು ಪ್ರಾಕೃತಿಕವಾದದ್ದು ನಶ್ವರವೇಸರಿ. ಅದಷ್ಟೇ ಲಕ್ಷ್ಮಿಯಲ್ಲ. ಲಕ್ಷ್ಮಿ ಭಕ್ತಿಯ ಅಪರಾವತಾರ. ಭಕ್ತಿಗೆ ಇನ್ನೊಂದು ಹೆಸರೇ ಲಕ್ಶ್ಮೀ. ಆದ್ದರಿಂದ ದೇವರ ಕೈಂಕರ್ಯ ಮಾಡುವಾಗ ಶಂಖ (ಅವಳ ಪ್ರತಿನಿಧಿ) ಸ್ಪರ್ಶಿಸಿಯೇತೀರಬೇಕು. ಈ ಲಕ್ಷ್ಮಿ ಭಕ್ತರ ಮನೆಯಲ್ಲಿ ಸ್ಥಿರ. ಅವಳ ಸಾನಿಧ್ಯದಿಂದಲೇ ಪೂಜೆ ನಿತ್ಯವಾಗುತ್ತೆ. ಶಾಶ್ವತವಾಗುತ್ತೆ. ಆಗುವ ಉತ್ಸವವೂ ಶಾಶ್ವತವಾಗುತ್ತೆ. ಹಾಗಾಗಿ ಚಿತ್ತದಲ್ಲಿ ಆನಂದವಾಗುತ್ತೆ. (ಚಿತ್ತದಲ್ಲಿ ಆನಂದ, ಸುಖವನೀವಳು ರಮಾ ಎಂಬುವ ಪುರಂರಂದರರ ಮಾತನ್ನು ನೆನೆಸಿಕೊಳ್ಳಿ) ಆ ಆನಂದಜ್ಯೋತಿ ಉಂಟುಮಾಡೆಂದು ಪುರಂದರದಾಸರು ಬೇಡುತ್ತಾರೆ. ಇದು ಮೂರನೆಯ ನುಡಿ.

ನಾವು ಕುಂದು ಪೂರಿತರು ನೀನು ಕುಂದೆಳ್ಳಿನಿತಾದರೂ ಇಲ್ಲದವಳು. ಆಸೆಗೆ

ಒಳಗಾಗುತ್ತೇವೆ. ಸಂಕಟ ಬಂದಾಗ ಹೇಗೋ ಪಾರಾಯಿತೆಂದು ಸನ್ಮಾರ್ಗ ಬಿಡುತ್ತೇವೆ. ಹಾಗಾಗಿ ಬೇಡಬಾರದ್ದನ್ನು ಬೇಡುತ್ತೇವೆ. ಮಾಡಬಾರದ್ದನ್ನು ಮಾಡುತ್ತೇವೆ. ಆದರೆ ನೀನು ನಮ್ಮಮ್ಮ ಅಲ್ಲವೇ, ಆದ್ದರಿಂದ ಹಾಗೆ ಬೇಡಿದಾಗ ನೀನು ಕೈಗಳನ್ನು (ಶ್ರೀ ವಿಷ್ಣು ಕಂಕಣಗಳನ್ನು ಕಟ್ಟಿದ ಕೈಗಳನ್ನು) ಅಲ್ಲಾಡಿಸಿ ಬೇಡಿಕೆಗಳನ್ನು ನಿರಾಕರಿಸಿ ಶುದ್ಧವಾದ ಸಾತ್ವಿಕ ಭಾಗ್ಯ (ಜ್ಞಾನದ ನಿಧಿಯನ್ನು) ಕರುಣಿಸು. ಈ ಕಾರ್ಯ ನೀನು ಮಾಡಬೇಕೆಂದೇ ನಮ್ಮಪ್ಪ ನಿನಗೆ ಕಂಕಣ ಕಟ್ಟಿದ್ದಾನೆ. ಅಮ್ಮಾ, ನೀನು ನಿರಾಭರಣ ಸುಂದರಿ ಆಭರಣಗಳಿಗೆ ನೀನು ಸೌಂದರ್ಯ ನೀಡುತ್ತಿ. ಅವುಗಳ ಅವಶ್ಯಕತೆ ನಿನಗಿಲ್ಲ. ಅಂತಹ ಸೌಂದರ್ಯ ಶ್ರೀ ಹರಿ ಪಾಲಿಸಿದ್ದಾನೆ. ನಿನ್ನ ದೊಡ್ಡ ಭಾಗ್ಯ ಕುಂಕುಮದಿಂದ ಸೂಚಿತನಾದ ನಾರಯಣನೇಸರಿ. ಅಂತಹ ನೀನು ವೆಂಕಟರಮಣ ತಿರುಪತಿಯಲ್ಲಿ ನಿಂತಾಗ ಅವನ ಗಲ್ಲಗಳ ವಿನಹಾ ಎಲ್ಲಾ ಅಂಗಗಳಲ್ಲೂ ಬಿಂಕದಿಂದ ಅಲಂಕರಿಸಿ ನೀನೂ ಮೆರೆಯುತ್ತಿದ್ದೀಯಲ್ಲವೇ! ಇದು ನಾಲ್ಕನೆಯ ನುಡಿ.

ಸಕ್ಕರೆ ಘನ ಪದಾರ್ಥ. ರಾಶಿ ಯಾಗಬಹುದು. ಆದರೆ ಹರಿಯಲಾರದು. ತುಪ್ಪ ಕರಗಿದ ಸ್ವಲ್ಪ ಹೊತ್ತು ಹರಿದೀತು. ನಂತರ ಗಟ್ಟಿಯಾಗಿಬಿಡುತ್ತೆ. ಇದೂ ಹರಿಯಲಾರದು. ಶ್ರೀ ದಾಸರು ಈ ಪದಗಳನ್ನು ಸಂಖ್ಯೆಗಳನ್ನು ಸೂಚಿಸಲು ಬರೆದ್ದಿದ್ದಾರೆ. ಸ–೭ , ಕ್ಕ–೨ , ರೆ–೨ = ೧೧ ಐದು ಪಂಚೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಒಂದು ಮನಸ್ಸು ಕೂಡಿದಾಗ ಏಕಾದಶೇಂದ್ರಿಯಗಳಾಗುತ್ತವೆ. ಇವುಗಳಿಂದ ಕ್ರಿಯೆಗಳು ನಡೆದೂ ನಡೆದೂ ಪೂರ್ವಜನ್ಮಗಳಲ್ಲಿ ಇಂದಿನ ಜನ್ಮದಲ್ಲಿ ಪ್ರಾಯಃ ಮುಂದೆಯೂ ದೊಡ್ಡ ಕೆರೆಯಂತಾಗುತ್ತದೆ. ಅದಕ್ಕೆ ಸರಿಯಾದ ತೂಬು ಕಾಲುವೆ ಇಲ್ಲದಿದ್ದರೆ, ತುಂಬಿ ತುಳುಕಿ ಅನರ್ಥವಾಗುತ್ತೆ, ಹಾಗಾಗದಿರಲು ಶ್ರೀ ವಿಷ್ಣುವಿನೆಡೆಗೆ ಹರಿಯುವಂತೆ ಕಾಲುವೆಯನ್ನು ನಿರ್ಮಿಸಿ ಅನುಗ್ರಹಿಸು. ಇದಕ್ಕೆ ಕಡಿಯುವ ಕೆಲಸ ಆಗಬೇಕಷ್ಟೆ. ಅದನ್ನು ತುಪ್ಪವೆಂಬುದರಿಂದ ಸೂಚಿತವಾಗಿದೆ. ತು–೬, ಪ್ಪ–೨ = ೮ ಅಷ್ಟ ಮದಗಳು ಧನ, ಯೌವನ, ವಿದ್ಯ, ಅಧಿಕಾರ, ಜ್ಞಾನ, ಕುಲ, ಬಲ ಮತ್ತು ಸಂಪತ್ತು ಇವುಗಳನ್ನು ದಯಮಾಡಿ ಕಡಿದು ಕಾಲುವೆ ನಿರ್ಮಿಸಿ ಕ್ರಿಯಗಳು ಹರಿಪರವಾಗುವಂತೆ ಮಾಡು.

ನಾನು ನಿನ್ನ ಪೂಜೆಗೆಕೂತೆನೆಂದರೆ ದೈತ್ಯ ಗುರು (ಬಲಿಯನ್ನೇ ಅಡ್ಡಪಡಿಸಲೆತ್ನಿಸಿದವನು ಅದೂ ಹರಿಯ ಸಮ್ಮುಖದಲ್ಲಿ) ಶುಕ್ರ ಕಾಡುತ್ತಾನೆ ಅವನಿಗೆ ನಾನು ಯಾವಲೆಕ್ಕ ಅವನನ್ನು ನಿಯಂತ್ರಿಸಿ ನನ್ನನ್ನು ಕಾಪಾಡು. ಅದನ್ನು

ನಿನಗೇ ಹೇಳುತ್ತಿದ್ದೇನೆ. ಏಕೆಂದರೆ ನೀನು ಅಳಿಗಿರಿ ರಂಗನ ರಾಣಿ. ಅಳಿ ಎಂದರೆ ಮೃದು, ಅಳಿ ಎಂದರೆ ಕಠಿಣವೂ ಹೌದು ಬೆಳಕು ಕತ್ತಲೆ ಮಿಶ್ರಣ ವಿರಬಹುದು. ಆದರೆ ಬೆಳಕಲ್ಲಿ ಕತ್ತಲೆ ಇಲ್ಲ, ಕತ್ತಲೆಯಲ್ಲಿ ಬೆಳಕಿಲ್ಲ. ಆದರೆ ಮೃದುತ್ವವೂ ಕಾಠಿಣ್ಯತೆಯೂ ಗಿರಿಯೋಪಾದಿಯಲ್ಲಿ ಅಂದರೆ ಅನಂತಪಟ್ಟು (ಹೀಗೆಯೇ ಇತರ ವಿರುದ್ಧ ಗುಣಗಳು ಇರುವುದು ಶ್ರೀ ಹರಿಯಲ್ಲಿ ಮಾತ್ರ) (ದುಷ್ಟ ಗುಣಗಳಲ್ಲವೆಂಬುದನ್ನು ಮರೆಯದಿರಿ, ಅವಾವುದೂ ಎಳ್ಳಷ್ಟೂ ಇಲ್ಲ) ಆದ್ದರಿಂದ ಅವನನ್ನು ನಿಗ್ರಹಿಸಲು ಶಕ್ತಿ ಇದೆ. ಇರಬಹುದು, ಆದರೆ ನಿನಗೇಕೆ ಸಹಾಯ ಮಾಡಬೇಕೆಂದರೆ ಮತ್ತೆ ದೇವರು ಅಳಗಿರಿಯಾಗಿದ್ದಾನೆ.

ನವವಿಧ ಭಕ್ತಿಗಳೆಂಬ ಕುಸುಮಗಳಿಂದ ರಸಗ್ರಹಣ ಮಾಡುವವರು ಭಕ್ತರೆಂಬ ದುಂಬಿಗಳು (ಅಳಿಗಳು). ಬಾಕಿಯವರಿಗೆ ಆ ಕುಸುಮಗಳ ಬಣ್ಣ ಕಾಣಬಹುದು, ವಾಸನೆ ಹಿಡಿಯಬಹುದು, ರಸಗ್ರಹಣ ಅವರಿಂದಾಗದು. ರಸಗ್ರಣ ಮಾಡಿದ ದುಂಬಿಗಳು ಎತ್ತರದಲ್ಲಿ ತಮ್ಮಲ್ಲೇ ಉತ್ಪತ್ತಿಯಾಗುವ ಮೇಣವೆಂಬ ಅಂಟಿನ ವಸ್ತುವಿನಿಂದ ಸಮಷಡ್ಭುಜಾಕೃತಿಯ ಗೂಡನ್ನು ರಚಿಸಿ ಗ್ರಹಣಮಾಡಿದ ಮಧುರಸವನ್ನು ಶೇಖರಿಸಿ ಆನಂದಿಸುತ್ತವೆ. ಈ ಕ್ರಿಯಗಳೇ ಅವಕ್ಕೆ ಆಹಾರ ವಿಹಾರ ಬೇರಾವುದೂ ಬೇಕಿಲ್ಲ. ಅವುಗಳಿಗೆ ಈ ಶಕ್ತಿಯನ್ನು ಪರಮಾತ್ಮ ಅನುಗ್ರಹಿಸಿದ್ದಾನೆ. ಅವನು ಅನುಗ್ರಹಿಸಿದ ಶಕ್ತಿಗಳನ್ನು ಅವು ಬಳಸಿಕೊಳ್ಳುತ್ತವೆ. ಹಾಗೆಯೇ ಭಕ್ತರೆಂಬ ಷಟ್ಪದಿಗಳು ಅರಿಷಡ್ವರ್ಗಗಳನ್ನು ನಿಯಂತ್ರಿಸಿ ನವವಿಧ ಭಕ್ತಿ ಕುಸುಮಗಳ ರಸ ಗ್ರಹಣಮಾಡಿ ಅವಕ್ಕೆ ಮೊದಲಿಲ್ಲದ ರೂಪ, ರುಚಿಯನ್ನು ಇತ್ತು ಎತ್ತರವಾದ (ಶ್ರೇಷ್ಠವಾದ) ಸ್ಥಾನದಲ್ಲಿ ಷಡ್ಗುಣಪೂರ್ಣನಾದ ಪರಮಾತ್ಮನನ್ನು ಆಹ್ವಾನಿಸಿ ಭಕ್ತಿ ಸಮರ್ಪಣೆ ಮಾಡುತ್ತಾರೆ. ಇತರರು ಭಕ್ತಿಯ ವಾಸನೆ, ರೂಪ ಗ್ರಹಿಸ ಬಹುದು, ರಸಗ್ರಹಣವಾಗದು. ಅದು ಅವರ ಚೈತನ್ಯದಲ್ಲಿಲ್ಲ. ಈ ಕಾರ್ಯಕ್ಕೆ ಸರ್ವದಾ ಸರ್ವತ್ರ ಸರ್ವೋತ್ತಮನ ಸೇವಾ ಮತ್ತು ಸ್ಮರಣ ನಿರಂತರ ನಿತ್ಯ ಮಾಡುತ್ತಿರುವ ಸರ್ವ ಸುಮಂಗಳೆಯಾದ ಪರಮಾತ್ಮನ ಪತ್ನಿಯಾದ ನೀನು ಸಹಾಯ ಮಾಡಬೇಕು. ಪರಮಾತ್ಮ ನಿನ್ನಲ್ಲಿದ್ದು ಆನಂದ ಕೊಡುತ್ತಲೇ ಇದ್ದಾನೆ. ತಾನು ಸದಾನಂದಮಯನೇ ಆಗಿಯೇ ಇದ್ದಾನೆ. ಆದ್ದರಿಂದ ನಿನ್ನನ್ನು ಅನಾಘ್ರಾಣಿತ ಕುಸುಮ, ಕುಮಾರಿಯಂದಿದ್ದೇನೆ, ನನಗೆ ದಯಮಾಡು. ಅವನು ಅಳಿ ಅಂದರೆ ಮೃದು ಮತ್ತು ಕಠಿಣ ಇಂತಹ ವಿರುದ್ಧ ಗುಣಗಳು ಗಿರಿ ಪ್ರಮಾಣದಲ್ಲಿರತಕ್ಕವನು ಚೊಕ್ಕನಾದವನು ಅಂದರೆ ಪರಿಶುದ್ಧಾತ್ಮ- ಆದ್ದರಿಂದ ಅಳಿಗಿರಿ ನೀನು ಅವನ ರಾಣಿ.

ಆದ್ದರಿಂದ ನನ್ನ ರಕ್ಷಣೆಗೆ ಕೈನೀಡು ಎಂದು ಪ್ರಾರ್ಥಿಸಿದ್ದಾರೆಂದು ತಿಳಿಸುತ್ತಾ ಈ ಲಘು ಪುನರ್ಬರಹವನ್ನು ವ್ಯಯ ಪುಷ್ಯ ಕೃಷ್ಣ ದಶಮಿ ಭಾನುವಾರದಂದು ಶ್ರೀಮದ್ವಾದಿರಾಜ ಹೃದಯಾಂತರ್ಗತ ಶ್ರೀ ಲಕ್ಷ್ಮೀಹಯಗ್ರೀವಾಭಿನ್ನ ರಾಮಗುರು ಹಯವದನಸ್ವಾಮಿಗೆ ಅರ್ಪಿಸಿದೆ.

ಸರ್ವೇ ಜನಾಃ ಸುಖಿನೋ ಭವಂತು

ಡಾ|| ನಾ ಸು. ಶ್ರೀಗಿರಿನಾಥ್
ಬೆಂಗಳೂರು